# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತಾರನೆಯ ಅಧಿವೇಶನ

## ಕಾರ್ಯಕಲಾಪಗಳ ಪಟ್ಟಿ

## ಸೋಮವಾರ, ದಿನಾಂಕ:21ನೇ ಫೆಬ್ರವರಿ, 2022

## (ಸಮಯ: ಬೆಳಗ್ಗೆ: 11.00 ಗಂಟೆಗೆ)

* * *

## 01. ಪ್ರಶ್ನೋತ್ತರ

ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಐದನೆಯ ಪಟ್ಟಿ

ಆ) **ತಡೆಹಿಡಿಯಲಾದ ಪ್ರಶ್ನೆ:**

4ನೇ ಪಟ್ಟಿಯಿಂದ ತಡೆಹಿಡಿಯಲಾದ ಶ್ರೀ ಎಸ್. ರವಿ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 55 (421) } ಮಾನ್ಯ ಅರಣ್ಯ, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು

ಇ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಐದನೆಯ ಪಟ್ಟಿ

## 02. ಗಮನ ಸೆಳೆಯುವ ಸೂಚನೆಗಳು

01. **ಶ್ರೀ ಪ್ರಕಾಶ್ ಕೆ. ರಾಥೋಡ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು** ಅವರು ಬೆಂಗಳೂರಿನ ಐ.ಟಿ.ಐ. ಕಾರ್ಖಾನೆಯಲ್ಲಿ ಸುಮಾರು 30 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ 80 ಕಾರ್ಮಿಕರನ್ನು ಕಾನೂನು ಬಾಹಿರವಾಗಿ ಸೇವೆಯಿಂದ ವಜಾ ಮಾಡಿರುವ ಕುರಿತು ಮಾನ್ಯ ಕಾರ್ಮಿಕ ಸಚಿವರ ಗಮನ ಸೆಳೆಯುವುದು.

02. **ಡಾ. ವೈ.ಎ. ನಾರಾಯಣಸ್ವಾಮಿ** ಅವರು ಬೆಂಗಳೂರು ನಗರದಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳು ಕಾನೂನು ಬಾಹಿರ ಚಟುವಟಿಕೆಗಳನ್ನು ನಡೆಸುತ್ತಿರುವುದರಿಂದ ಬೆಂಗಳೂರಿನ ನಾಗರೀಕರ ನೆಮ್ಮದಿ ಕೆಡಿಸಿರುವ ವಿಷಯದ ಕುರಿತು ಮಾನ್ಯ ಗೃಹ ಸಚಿವರ ಗಮನ ಸೆಳೆಯುವುದು.

03. **ಶ್ರೀಯುತರುಗಳಾದ ಕೆ.ಎ. ತಿಪ್ಪೇಸ್ವಾಮಿ, ಮರಿತಿಬ್ಬೇಗೌಡ ಮತ್ತು ಕೆ.ಟಿ. ಶ್ರೀಕಂಠೇಗೌಡ,** ಅವರುಗಳು ರಾಜ್ಯದಲ್ಲಿರುವ ವಿದ್ಯುತ್ ವಿತರಣಾ ಕಂಪನಿಗಳಿಂದ ವಿವಿಧ ಉತ್ಪಾದನಾ ಕಂಪನಿಗಳಿಗೆ ಬಿಲ್ಲು ಪಾವತಿ ಮಾಡುವ ಬಗ್ಗೆ ಹಾಗೂ ಅಸಂಪ್ರದಾಯಕ ಇಂಧನ ಮೂಲಗಳಾದ ಸೌರಶಕ್ತಿ, ಪವನಶಕ್ತಿ, ಕಿರು-ಜಲವಿದ್ಯುತ್ ಉತ್ಪಾದನೆಯ ನಿರ್ವಹಣೆ ಮತ್ತು ಉಸ್ತುವಾರಿ ವಹಿಸುವಲ್ಲಿ ಇಂಧನ ಇಲಾಖೆ ವಿಫಲವಾಗಿರುವ ಕುರಿತು ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನ ಸೆಳೆಯುವುದು.

04. **ಶ್ರೀ ಗೋವಿಂದರಾಜು** ಅವರು ಕೋಲಾರ ಜಿಲ್ಲೆಯ ಅರೆಹಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಕಾನೂನು ಕಾಲೇಜಿಗೆ ಬೋಧಕ/ ಬೋಧಕೇತರ ಸಿಬ್ಬಂದಿ ಹಾಗೂ ವಸತಿ ವ್ಯವಸ್ಥೆಯನ್ನು ಒಳಗೊಂಡಂತೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕುರಿತು ಮಾನ್ಯ ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರ ಗಮನ ಸೆಳೆಯುವುದು.

..2..

೦5. **ಶ್ರೀಯುತರುಗಳಾದ ಸುನೀಲ್‌ಗೌಡ ಪಾಟೀಲ್, ಡಿ.ಎಸ್. ಅರುಣ್ ಮತ್ತು ಚನ್ನರಾಜ್ ಬಸವರಾಜ್ ಹಟ್ಟಿಹೊಳಿ** ಅವರುಗಳು ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಸಿಬ್ಬಂದಿಗಳ ಗೌರವಧನ ಹೆಚ್ಚಳ ಮಾಡುವ ಹಾಗೂ ಕೇರಳ ಮಾದರಿಯ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುವುದು.

೦6. **ಶ್ರೀ ರಾಜೇಂದ್ರ ರಾಜಣ್ಣ** ಅವರು ಬಯಲು ಸೀಮೆಯ ಏಳು ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸುವ ಎತ್ತಿನ ಹೊಳೆ ಯೋಜನೆಯ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿರುವ ಬಗ್ಗೆ ಮಾನ್ಯ ಜಲಸಂಪನ್ಮೂಲ ಸಚಿವರ ಗಮನ ಸೆಳೆಯುವುದು.

## 03. ನಿಯಮ 330ರ ಮೇರೆಗೆ

೦1. **ಶ್ರೀ ಪುಟ್ಟಣ್ಣ** ಅವರು ಖಾಸಗಿ ಅನುದಾನಿತ/ ಅನುದಾನರಹಿತ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ನವೀಕರಣ ನಿಯಮಗಳನ್ನು ಸರಳೀಕರಣಗೊಳಿಸುವ ಕುರಿತು ಪ್ರಸ್ತಾಪಿಸುವುದು.

೦2. **ಶ್ರೀ ಎಸ್. ರವಿ** ಅವರು ರಾಜ್ಯದಲ್ಲಿ ಮಂಜೂರಾದ ಹೊಸ ತಾಲ್ಲೂಕುಗಳಿಗೆ ಅವಶ್ಯವಿರುವ ಮೂಲಭೂತ ಸೌಕರ್ಯಗಳಿಗಾಗಿ ಅಗತ್ಯ ಅನುದಾನಗಳನ್ನು ಒದಗಿಸುವ ಕುರಿತು ಪ್ರಸ್ತಾಪಿಸುವುದು.

೦3. **ಶ್ರೀ ಯು.ಬಿ. ವೆಂಕಟೇಶ್** ಅವರು ರಾಜ್ಯದಲ್ಲಿ ಬಿಟ್ ಕಾಯಿನ್ ಹಗರಣ ಕುರಿತು ಆಗಿರುವ ತನಿಖಾ ಪ್ರಗತಿ ಹಾಗೂ ಅದರ ಬೆಳವಣಿಗೆಗಳ ವಿಷಯದ ಕುರಿತು ಪ್ರಸ್ತಾಪಿಸುವುದು.

೦4. **ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ಹಾಗೂ ಶ್ರೀ ಮರಿತಿಬ್ಬೇಗೌಡ** ಅವರುಗಳು ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ಕೋಟಗಲ್ ಗ್ರಾಮದ ಸರ್ವೇ ನಂ.11ರಲ್ಲಿ ಜಿ.ಟಿ.ಬಿ. ಕ್ರಷರ್ಸ್, ಇವರು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಕಾನೂನು ಬಾಹಿರವಾಗಿ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿಕೊಂಡಿರುವ ಕುರಿತು ಪ್ರಸ್ತಾಪಿಸುವುದು.

೦5. **ಶ್ರೀ ಶಶೀಲ್ ಜಿ. ನಮೋಶಿ** ಅವರು ಇತ್ತೀಚಿಗೆ ರಾಜ್ಯಾದ್ಯಂತ ಹೆಚ್ಚುತ್ತಿರುವ ಗಾಂಜಾ ಮತ್ತು ಡ್ರಗ್ಸ್‌ಗಳ ಮಾರಾಟದಿಂದ ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಮಾದಕ ವ್ಯಸನಿಗಳಾಗುತ್ತಿರುವ ಕುರಿತು ಪ್ರಸ್ತಾಪಿಸುವುದು.

## 04. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ

"2022ನೇ ಫೆಬ್ರವರಿ, 14ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಶಾಸಕರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಶಾಸಕರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ" ಎಂದು ದಿನಾಂಕ:15.02.2022ರಂದು **ಶ್ರೀ ಅರುಣ ಶಹಾಪುರ** ರವರು ಸೂಚಿಸಿದ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ:

ಎರಡನೇ ದಿನ

**05. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಚರ್ಚೆ**

| | |
|---|---|
| **ಶ್ರೀಯುತರುಗಳಾದ;-<br>ಕೆ.ಎ. ತಿಪ್ಪೇಸ್ವಾಮಿ, ಮರಿತಿಬ್ಬೇಗೌಡ ಮತ್ತು ಕೆ.ಟಿ. ಶ್ರೀಕಂಠೇಗೌಡ ಅವರುಗಳು** | ಭಾರತೀಯ ಆಡಳಿತ ಸೇವಾ ನಿಯಮಗಳು (ವೃಂದ) 1954ಗಳಿಗೆ ಪ್ರಸ್ತಾಪಿಸಿರುವ ತಿದ್ದುಪಡಿಯಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳ ಸಹಮತಿ ಇಲ್ಲದಿದ್ದರೂ ಅಧಿಕಾರಿಗಳನ್ನು ಹುದ್ದೆಗಳಿಂದ ಬಿಡುಗಡೆ ಮಾಡಿ ಕೇಂದ್ರ ಸರ್ಕಾರದ ಸೇವೆ ಸಲ್ಲಿಸಬೇಕೆಂಬ ನಿಬಂಧನೆ ತಂದಿರುವ ಕುರಿತು |

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

---

**ಪ್ರತಿ ದಿನದ ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿಯೂ ಸಹ ಪಡೆದುಕೊಳ್ಳಬಹುದು.**

**www.kla.kar.nic.in/council/council.htm**